

# ಜಾರ್ಡಿನ್ ಮಜೊರೆಲ್ಲಾ

## ಅಟ್ಲಾಸ್ ಪರ್ವತ ತಪ್ಪಲಿನ ನೀಲ ಉದ್ಯಾನ

ನೀಲಿ ಬಣ್ಣದ ಮೋಹಕ್ಕೆ ಬಿದ್ದು ಮನೆಯನ್ನೂ, ಉದ್ಯಾನವನ್ನೂ ಆ ಬಣ್ಣದಲ್ಲೇ ಮಿಂದೇಳುವಂತೆ ನಿರ್ಮಿಸಿದ ಫ್ರೆಂಚ್ ಕಲಾವಿದನ ಶ್ರಮದ ಫಲ 'ಜಾರ್ಡಿನ್ ಮಜೊರೆಲ್ಲಾ' ಎಂಬ ಸುಂದರ ನೀಲ ಉದ್ಯಾನ.

■ ಪುಷ್ಪಾ ಮೋಹನ

ಪಶ್ಚಿಮಕ್ಕೆ ಅಟ್ಲಾಂಟಿಕ್ ಮಹಾಸಾಗರ ಮತ್ತು ಉತ್ತರಕ್ಕೆ ಮೆಡಿಟರೇನಿಯನ್ ಸಮುದ್ರ ಸುತ್ತುವರಿದಿರುವ ಉತ್ತರ ಆಫ್ರಿಕಾದ ಮೊರಾಕೊ ಉಷ್ಣವಲಯ ಪ್ರದೇಶ ಮಾತ್ರವಲ್ಲ, ಸುಂದರ ತಾಣ ಎಂಬುದರಲ್ಲೂ ಸಂಶಯವಿಲ್ಲ. ನಾವು ಅಲ್ಲಿಗೆ ಹೋದಾಗ 41–42 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿತ್ತು.

ಆ ಸುಡು ಬಿಸಿಲಲ್ಲೂ ಕಣ್ಣಿಗೆ ತಂಪು ನೀಡಿದ್ದು, ಅಲ್ಲಿನ ಆಲಿವ್ ತೋಪುಗಳು, ಪಾಮ್, ಕ್ಯಾಕ್ಟಸ್‌ಗಳ ಸುಂದರ ಉದ್ಯಾನಗಳು. ಅಲ್ಲಿನ ಮರಾಕ್ಕೇಶ್‌ನಲ್ಲಿ ನಾವು ವಾಸ್ತವ್ಯ ಹೂಡಿದ್ದೆವು. ಮರಾಕ್ಕೇಶ್ ಮೊರಾಕೊದ ಆರ್ಥಿಕ ಕೇಂದ್ರ, ಸಾಮ್ರಾಜ್ಯಶಾಹಿ ಶಹರ. ದೇಶದ ನಾಲ್ಕನೆಯ ದೊಡ್ಡ ನಗರ ಕೂಡ ಹೌದು.

ಅಟ್ಲಾಸ್ ಪರ್ವತಗಳಡಿಯಲ್ಲಿ ಸ್ಥಿತವಾಗಿರುವ ಈ ನಗರವನ್ನು 11ನೇ ಶತಮಾನದಲ್ಲಿ ಅಲ್ಮೊರಾವಿಡ್ ಸಾಮ್ರಾಜ್ಯದ ಅಲಿ ಇಬ್ನ ಯೂಸುಫ್ ಎಂಬಾತ ಕಟ್ಟಿದ್ದು. ಪುರಾತನ ಶಹರದ ಭಾಗವನ್ನು 'ಮೆದಿನಾ' ಎಂದು ಕರೆಯುತ್ತಾರೆ. ಇದನ್ನು 1985ರಲ್ಲಿ ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಸೇರಿಸಲಾಗಿದೆ.

ಟೆನ್ ಶಿಫ್ಟ್ ನದಿ ಕಣಿವೆಯಲ್ಲಿರುವ ಮರಾಕ್ಕೇಶ್‌ನಲ್ಲಿ ಕಣ್ಣಿಗೆ ಹಿತ ನೀಡುವ ಹಲವು ಜಾಗಗಳಿವೆ. ಜಗತ್ಪ್ರಸಿದ್ಧ ಜೆಮಾ–ಎಲ್–ಫಿನಾ ಸ್ಕ್ವೇರ್, ಸೂಕ್ಸ್, ಉದ್ಯಾನವನಗಳು (ಮೆನರಾ, ಅಗ್ ದಲ್, ಆಲಿವ್, ಆರ್ಚರ್ಡ್ ತೋಪುಗಳು), ಕೌಟುಬಿಯಾ ಮಸೀದಿ, ಬಹಿಯಾ ಮುಂತಾದ ಅರಮನೆಗಳು, ಸಾಂಪ್ರದಾಯಿಕ ಮನೆಗಳಾದ ರಿಯಾದ್ಸ್, ಅಟ್ಲಾಸ್ ಪರ್ವತ ಪ್ರದೇಶಗಳು ಮರಾಕ್ಕೇಶ್‌ನ ಚೆಲುವನ್ನು ಹೆಚ್ಚಿಸಿವೆ. ಇಲ್ಲಿನ ಮತ್ತೊಂದು ಆಕರ್ಷಣೆ 'ಜಾರ್ಡಿನ್ ಮಜೊರೆಲ್ಲಾ'. ಸುಂದರ ಸಸ್ಯೋದ್ಯಾನವಾಗಿರುವ ಈ ತಾಣ ರಮ್ಯ ಭೂಪ್ರದೇಶ. 'ಜಾರ್ಡಿನ್' ಅಂದರೆ ಉದ್ಯಾನವನ. 'ಮಜೊರೆಲ್ಲಾ' ಕಲಾವಿದನ ಹೆಸರಾಗಿದ್ದು, ಸುಂದರ ನೀಲ ಉದ್ಯಾನಕ್ಕೆ 'ಜಾರ್ಡಿನ್ ಮಜೊರೆಲ್ಲಾ' ಎಂದು ಹೆಸರಿಸಲಾಗಿದೆ.

ಫ್ರೆಂಚ್ ಕಲಾವಿದ ಜಾಕ್ವೆಸ್ ಮಜೊರೆಲ್ಲಾನ ಖಾಸಗಿ ಸ್ವತ್ತಾಗಿದ್ದ ಈ ಉದ್ಯಾನ, ಒಂದು ಹೆಕ್ಟೇರ್ ವಿಸ್ತೀರ್ಣದ ಅಪರೂಪದ ಸಸ್ಯೋದ್ಯಾನ. 1930ರಲ್ಲಿ ಜ್ಯಾಮಿತಿಯ ಆಕೃತಿಯ ಈ ನಿವಾಸವನ್ನು ವಿನ್ಯಾಸಗೊಳಿಸಿದ್ದು ಫ್ರೆಂಚ್ ವಿನ್ಯಾಸಕಾರ ಪಾಲ್ ಸೈನರ್. ಮರಾಕ್ಕೇಶ್‌ನ ಮನೆ, ಮಹಲುಗಳಲ್ಲಿ ವ್ಯಾಪಕವಾಗಿ ಬಳಸುತ್ತಿದ್ದ ನೀಲಿ ಬಣ್ಣ ಪ್ರಸಿದ್ಧ ವರ್ಣಚಿತ್ರಕಾರನಾಗಿದ್ದ ಜಾಕ್ವೆಸ್‌ನನ್ನು ಬಹುವಾಗಿ ಸೆಳೆದಿತ್ತು. ಈ ಕಾಂತಿಯುತ ಕೊಬಾಲ್ಟ್ ನೀಲಿ ವರ್ಣಕ್ಕೆ ಮೋಹಗೊಂಡು ಅದೇ ವರ್ಣದ ಟೈಲ್ಸ್‌ಗಳನ್ನು ಉದ್ಯಾನವನದಲ್ಲಿ ಹಾಕಿಸಿದ್ದಲ್ಲದೆ, ಎಲ್ಲೆಲ್ಲೂ ನೀಲಿ ಬಣ್ಣವೇ ಕಣ್ತುಂಬಿಕೊಳ್ಳುವಂತೆ ಮನೆಯನ್ನೂ ವಿನ್ಯಾಸಗೊಳಿಸಿದ್ದ. ಆ ಬಣ್ಣಕ್ಕೆ 'ಮಜೊರೆಲ್ಲಾ ಬ್ಲೂ' ಎಂಬ ಪೇಟೆಂಟ್ ಕೂಡ ಪಡೆದುಕೊಂಡ.

40 ವರ್ಷಗಳ ಕಾಲ ನಿವಾಸವನ್ನು ವಿಸ್ತರಿಸುತ್ತಾ ಬಹು ಆಸಕ್ತಿಯಿಂದ ಸುತ್ತಲೂ ವೈವಿಧ್ಯಮಯವಾದ ಪಾಮ್, ಪಾಪಾಸುಕಳ್ಳಿ, ಅಗೇವ, ಲಿಲ್ಲಿ, ಜಾಸ್ಮಿನ್ ಮೊದಲಾದ ವರ್ಣಮಯ ಹೂಗಳ ಸಸ್ಯಗಳನ್ನು ಬೆಳೆಸುತ್ತಾ ಸಮೃದ್ಧ ಉದ್ಯಾನವನವನ್ನಾಗಿಸಲು ತನ್ನ ಜೀವನವನ್ನೇ ಮುಡಿಪಾಗಿಟ್ಟನು. ಈ ಸಸ್ಯೋದ್ಯಾನದಲ್ಲಿ ಬೆರಗುಗೊಳಿಸುವಂತಹ ಬೃಹದಾಕಾರದ ಎತ್ತರೆತ್ತರ ಪಾಮ್ ಗಿಡಗಳು, ಮನಮೋಹಕ ವೈವಿಧ್ಯಮಯ ಪಾಪಾಸುಕಳ್ಳಿಗಳ ಅಪ್ರತಿಮ ಸಸ್ಯ ಸಂಗ್ರಹವಿದೆ. ಹಲವಾರು ಸಸ್ಯ ಕುಟುಂಬದ ವರ್ಣಮಯ ಹೂಗಳ ಸುಂದರ ಗಿಡಬಳ್ಳಿಗಳ ಸಮೂಹದಲ್ಲಿ ಹಲವಾರು ಜಾತಿಯ ಪಕ್ಷಿಸಂಕುಲ ಚಿಲಿಪಿಲಿಗುಟ್ಟುತ್ತಾ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ. ಐದು ಖಂಡಗಳ 300 ಜಾತಿಯ ಸಸ್ಯಗಳು ಈ ಉದ್ಯಾನವನವನ್ನಲಂಕರಿಸಿವೆ. ಉದ್ಯಾನದ ಮಧ್ಯಭಾಗದಲ್ಲಿ ನೀಲ ವರ್ಣದ ಬರ್ಬರ್ ವಸ್ತು ಸಂಗ್ರಹಾಲಯವಿದೆ.

ವಿಶಿಷ್ಟ ಮೊರಾಕ್ಕನ್ ಶೈಲಿಯ ವಾಸ್ತುಶಿಲ್ಪ ತೋಟದ ಅಂದವನ್ನು ಇಮ್ಮಡಿಸಿದೆ. ಲಿಲ್ಲಿ ಕೊಳಗಳು, ಕಾರಂಜಿಗಳು, ನೀರತೊರೆಗಳು, ಲತಾಮಂಟಪಗಳು, ವರ್ಣಮಯ ಸುಮಗಳು, ಸ್ಮಾರಕಗಳು, ನೀಲಛಾಯೆಯ ಶಾಂತ ಪರಿಸರ ಮನಸ್ಸಿಗೆ ನೆಮ್ಮದಿಯೆನಿಸಿ ವಿಶ್ರಾಂತಿಯ ತಾಣವೆನಿಸಿದೆ.

ಪ್ರತಿಕ್ರಿಯಿಸಿ: feedback@sudha.co.in